ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) ಕೇಂದ್ರ ಸರ್ಕಾರದ ಹೊಸ ನೀತಿಯ ಅನುಸಾರ ಜಂಟೀ ವಲಯದಲ್ಲಿ ವಿಜಯನಗರ ಉಕ್ಕು ಕಾರ್ಖಾನೆಯನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆ. ಈ ಪ್ರಯುಕ್ತ ಆರ್ಹತೆಯುಳ್ಳ ಕೈಗಾರಿಕೋದ್ಯಮಿಗಳಿಂದ ಪ್ರಸ್ತಾವನೆಯನ್ನು ಪತ್ರಿಕಾ ಪ್ರಕಟಣೆ ಹೊರಡಿಸಿದ 10 ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ. ಬಂದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಹೆಚ್ಚು ಆರ್ಹತೆಯುಳ್ಳ ಕೈಗಾರಿಕೋದ್ಯಮಿಗೆ ವಿಜಯನಗರ ಉಕ್ಕು ಕಾರ್ಖಾನೆಯನ್ನು ಜಂಟೀ ವಲಯದಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಜನವರಿ ತಿಂಗಳ 10 ರೊಳಗಾಗಿ ಅರ್ಜಿಯನ್ನು ಸಲ್ಲಿಸಲು ಉದ್ದೇಶಿಸಲಾಗಿದೆ.

ಆ) ಆಂದಿನ ಪ್ರಧಾನ ಮಂತ್ರಿಗಳು 1971 ರಲ್ಲಿ ಅಡಿಗಲ್ಲು ಹಾಕಿದರು.

ಇ) ಇಲ್ಲ.

ವಿಷಯ :- ಶ್ರೀಮತಿ ಸರೋಜಿನಿ ಮಹಿಷಿ ವರದಿ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 494 (952)

ಶ್ರೀ ಶಿವಾನಂದ ಪಟೆ. ಕೌಜಲಗಿ (ಬೈಲಹೊಂಗಲ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನ್ನಡಿಗರಿಗೆ ಉದ್ಯೋಗಾವಕಾಶ ಒದಗಿಸುವ ಸಲುವಾಗಿ ನೇಮಿಸಿದ ಶ್ರೀಮತಿ ಮಹಿಷಿ ವರದಿಯನ್ನು ಸರ್ಕಾರಕ್ಕೆ ಯಾವಾಗ ಒಪ್ಪಿಸಲಾಯಿತು. ಆ ವರದಿಯನ್ನು ಸರ್ಕಾರದವರು ಒಪ್ಪಿಕೊಂಡಿರುವರೇ

ಆ) ಹಾಗಿದ್ದಲ್ಲಿ ಆ ವರದಿಯನ್ನು ಅನುಷ್ಠಾನಕ್ಕೆ ತರಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :- ...

ಅ) ದಿನಾಂಕ 30-12-1986 ರಂದು ಸಲ್ಲಿಸಿದೆ. ಬಹುಪಾಲು ಶಿಫಾರಸ್ಸುಗಳನ್ನು ಒಪ್ಪಿದೆ.

ಆ) ಸರ್ಕಾರವು ಅಂಗೀಕರಿಸಿದ ಶಿಫಾರಸ್ಸುಗಳನ್ನು ಜಾರಿಗೊಳಿಸುವುದನ್ನು ನೋಡಿಕೊಳ್ಳಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಅಧಿಕಾರಿಗಳ ಸಮಿತಿಯನ್ನು ರಚಿಸಿದೆ.

ವಿಷಯ :- ಬೆಳಗಾವಿ ಜಿಲ್ಲೆಯ ಸವದತ್ತಿ - ಬೈಲಹೊಂಗಲ - ಹೊಸೂರು ರಸ್ತೆಯನ್ನು ಕಾರ್‌ಪೇಟಿಂಗ್ ಮಾಡುವ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 495 (951)

ಶ್ರೀ ಶಿವಾನಂದ ಪಟೆ. ಕೌಜಲಗಿ (ಬೈಲಹೊಂಗಲ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಸವದತ್ತಿ-ಬೈಲಹೊಂಗಲ (ವ್ಹಾಯಾ ಮುನವಳ್ಳಿ-ಹೊಸೂರು) ರಸ್ತೆಯ ಲೋಕೋಪಯೋಗಿ ಇಲಾಖೆ ಕಾರ್ಯಕಾರಿ ಅಭಿಯಂತರರು, ಲೋಕೋಪಯೋಗಿ ಇಲಾಖೆ ನೀರಾವರಿ ಇಲಾಖೆ ಮಲಪ್ರಭಾ ಪ್ರೋಜೆಕ್ಟ್ ನವಿಲುತೀರ್ಥ ಇವರು ಯಾವ ವರ್ಷ ಈ ರಸ್ತೆಗೆ ಖಿಡಿ ಹಾಕಿ ಡಾಂಬರ ಮಾಡಿರುವರು ?

ಆ) ಈ ರಸ್ತೆಯನ್ನು ಖಿಡಿ ಹಾಕಿ ಡಾಂಬರ ಮಾಡಿದ ನಂತರ ಈ ರಸ್ತೆಯ ಮೇಲೆ ಪುನಃರೀಕಾರ್ಪೆಟಿಂಗ್ ಮಾಡಲಾಗಿದೆಯೇ ? ಮಾಡಿದ್ದರೆ ಎಂದು ಮಾಡಲಾಗಿದೆ ?

ಇ) ಈ ರಸ್ತೆಯು ಮಲಪ್ರಭಾ ಸಕ್ಕರೆ ಕಾರ್ಖಾನೆ ಕಮಾಂಡ ಏರಿಯಾದಲ್ಲಿ ಬರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಈ ರಸ್ತೆಯ ಮೇಲೆ ಪ್ರವಾಸಿ ಕೇಂದ್ರವಾದ ಶ್ರೀ ಕ್ಷೇತ್ರ ಸೊಗಲಕ್ಕೆ ಹಾಗೂ ಯಾತ್ರಿಕ ಸ್ಥಳವಾದ ಎಲ್ಲಮ್ಮನ ಗುಡ್ಡಕ್ಕೆ ಹೆಚ್ಚಿನ ಪ್ರವಾಸಿಕರು ಓಡಾಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) 31-3-1976 ರಂದು ಈ ರಸ್ತೆಯನ್ನು ಮಲಪ್ರಭಾ ಪ್ರಾಧಿಕಾರದಿಂದ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗಿದೆ. ಹಸ್ತಾಂತರಿಸುವಾಗ ಡಾಂಬರೀಕರಣವಾಗಿದ್ದಿತು.

ಆ) ವಿಶೇಷ ದುರಸ್ತಿ ಕಾರ್ಯಕ್ರಮದಡಿಯಲ್ಲಿ ಪ್ರತಿ ವರ್ಷ ಅತಿ ಕೆಟ್ಟು ಹೋದ ಭಾಗಗಳಲ್ಲಿ ಸುಧಾರಣೆ ಕೈಕೊಳ್ಳಲಾಗಿದೆ. ಆದರೆ ಪೂರ್ಣ ರಸ್ತೆಗೆ ಮರು ಡಾಂಬರೀಕರಣ ಮಾಡಿಲ್ಲ.

ಇ) ಮುನ್ನೊಳ್ಳಿ ಕ್ರಾಸ್‌ದಿಂದ ಸವದತ್ತಿ ವರೆಗಿನ ರಸ್ತೆಯು ಮಲಪ್ರಭಾ ಕಮಾಂಡ ಏರಿಯಾದಲ್ಲಿ ಬರುತ್ತದೆ. ಆದರೆ ಸಕ್ಕರೆ ಕಾರ್ಖಾನೆ ಕಮಾಂಡ್‌ನಲ್ಲಿ ಬರುವುದಿಲ್ಲ.

ಈ) ಗಮನಕ್ಕೆ ಬಂದಿದೆ.

ವಿಷಯ :– ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಳಿ ರಚನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 496 (677)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ?

ಆ) ಹಾಗಿದ್ದಲ್ಲಿ ಈ ಅಭಿವೃದ್ಧಿ ಮಂಡಳಿಯನ್ನು ಕೂಡಲೇ ರಚಿಸಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು ? (ಪೂರ್ಣ ವಿವರ ನೀಡುವುದು). ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :– ...

ಅ) ಇಲ್ಲಾ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :– ಪ್ರಶಸ್ತಿ ಪಡೆದ ಚಲನಚಿತ್ರ ನಟ ನಟಿಯರಿಗೆ ನಿವೇಶನ ನೀಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 497 (1102)

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪ್ರಶಸ್ತಿ ಪಡೆದ ಚಲನಚಿತ್ರ ನಟ ನಟಿ ಮತ್ತು ನಿರ್ದೇಶಕರುಗಳ ಸಂಖ್ಯೆ ಎಷ್ಟು ?

ಆ) ಅವರುಗಳಿಗೆ ವಿಶೇಷ ಆದ್ಯತೆ ಮೇಲೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿವೇಶನಗಳನ್ನು ನೀಡಲಾಗಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಸರ್ಕಾರದವರು ಅವರುಗಳಿಗೆ ನಿವೇಶನಗಳನ್ನು ಮಂಜೂರಾತಿ ನೀಡುವುರೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಚಲನಚಿತ್ರ ನಿರ್ದೇಶಕರು75. ಚಲನಚಿತ್ರ ನಟರು 44. ಚಲನಚಿತ್ರ ನಟಿಯರು 44.

ಆ) ಅರ್ಹತೆಯಿರುವ ಚಲನಚಿತ್ರ ರಂಗದವರಿಗೂ ಆದ್ಯತೆಯ ಮೇರೆಗೆ ಬಿ.ಡಿ.ಎ. ನಿವೇಶನಗಳನ್ನು ನಿಗದಿಪಡಿಸಿದ ಮಾರ್ಗಸೂಚಿಯ ಪ್ರಕಾರ ನೀಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

Sub :— State Public Sector Undertaking K. S. & D. L.

Unstrared L. A. Question No. 835.

Sri L. R. Shivarame Gouda (Nagamangal)

Will the Chief Minister be Pleased to State ?

a) Whether the State Public Sector Undertaking KS & DL. has obtained any contract to manufacture their products.

b) If so, the details of the private Companies and the amount of contract.

c) Out of the total capacity utilisation of KS & DL, what is the percentage of production undertook by KS & DL ?